ಪರಿವರ್ತಿಸಬೇಕಾಗಿತ್ತು. ಅಲ್ಲದೆ, ಅದನ್ನು ಮಾರಿ ಬಂದ ಹಣದಿಂದ ಆಕೆಯ ಮದುವಣಗಿತ್ತಿಯ ಪೋಷಾಕನ್ನೂ ಖರೀದಿಸಬೇಕಿತ್ತು.

ಮೂರು ದಿನಗಳ ಬಳಿಕ ಪಿಯಾನೊದ ಅಂತಿಮ ವಿದಾಯಕ್ಕಾಗಿ ಹೂವುಗಳಿಂದ ಅಲಂಕರಿಸಲಾಯಿತು. ಮನೆಯವರೆಲ್ಲ ಗಿರಾಕಿಗಳನ್ನು ಕಾಯಲು ಸಿದ್ಧರಾದರು.

ಮೊದಲು ಬಂದವರು ಒಬ್ಬ ಮಹಿಳೆ ಮತ್ತು ಅವಳ ಮಗಳು. ಆ ಹುಡುಗಿ ಪಿಯಾನೊವನ್ನು ತೆರೆದು ಒಂದೆರಡು ಸ್ವರವನ್ನು ನುಡಿಸಿದಳು ಕೂಡಾ.

'ಅಮ್ಮ, ಇದು ಏನೇನೂ ಚೆನ್ನಾಗಿಲ್ಲ' ಎಂದಳು ಆ ಹುಡುಗಿ.

ಮಹಿಳೆ ಎದ್ದು ನಿಂತಳು. ಅದರ ಒಂದೆರಡು ಕೀಲಿಗಳ ಮೇಲೆ ದಂತದ ಕವಚ ಇಲ್ಲದ್ದನ್ನು ಗಮನಿಸಿದಳು. ಆಮೇಲೆ ಮಗಳ ಕೈ ಹಿಡಿದು ಎಬ್ಬಿಸಿ ಹೊರ ನಡೆಯುತ್ತಾ 'ಇಂಥ ಗುಜರಿ ಮಾಲನ್ನು ನೋಡಲು ಇಷ್ಟು ದೂರ ಬರಬೇಕಾಯಿತಲ್ಲ' ಎಂದು ಗುನುಗಿದಳು. ಒಲಿವೈರಾ ಕುಟುಂಬಕ್ಕೆ ಅಸಮಾಧಾನ ತರುವ ಯಾವ ಪ್ರಮೇಯವೂ ಒದಗಲಿಲ್ಲ. ಅಷ್ಟರಲ್ಲಿ ಇನ್ನು ಮೂವರು ಗಿರಾಕಿಗಳ ಆಗಮನವಾಯಿತು. ಅದೂ ಒಂದೇ ಕಾಲಕ್ಕೆ – ಶ್ರೀಮಂತಿಕೆಯ ವಾಸನೆ ಸೂಸುವ ಒಬ್ಬಳು ವಿಧವೆ, ಕನ್ನಡಕ ಹಾಕಿದ ಕೈಲೊಂದು ಸಂಗೀತಕ್ಕೆ ಸಂಬಂಧಿಸಿದ ಪುಸ್ತಕ ಹಿಡಿದುಕೊಂಡ ಒಬ್ಬ ಹುಡುಗಿ ಮತ್ತು ಹಳೆಯ ಸುಕ್ಕುಸುಕ್ಕಾದ ಸೂಟಿನಲ್ಲಿ ಬಂದ ಕೆಂಚುಗೂದಲಿನ ವ್ಯಕ್ತಿ ಒಬ್ಬ.

ಆ ಹುಡುಗಿ ವಯಸ್ಸಾದವಳಿಗೆ, 'ಮೊದಲು ಬಂದವಳು ನಾನು. ಅದೇನೂ ಮಹತ್ವದ್ದಲ್ಲ. ನನ್ನ ಅಮ್ಮ ಬಯಸಿದಳೆಂದಷ್ಟೇ ನಾನು ಬಂದದ್ದು. ಮಾರಲು ಇಟ್ಟ ಅನೇಕ ಪಿಯಾನೊಗಳು ಲಭ್ಯವಿವೆ. ಆದರೆ, ನಾನು ಕರೆಗಂಟೆಯನ್ನೊತ್ತುವಾಗ ನೀವು ಇನ್ನೂ ಬಸ್ಸಿನಿಂದ ಇಳಿಯುತ್ತಿದ್ದಿರಿ. ಒಟ್ಟಿಗೆ ಒಳಗೆ ಬಂದದ್ದು ನಿಜ. ಆದರೆ, ಮೊದಲು ಬಂದವಳು ನಾನು.'

ಮೊದಲ ಸ್ಥಾನದ ಬಗ್ಗೆ ಈ ರೀತಿಯ ಜಗ್ಗಾಟ ಒಲಿವೈರಾ ಕುಟುಂಬ ಹಿಗ್ಗುವಂತೆ ಮಾಡಿತು. ಅದು ನ್ಯಾಯವಾದದ್ದೇ ಎಂದುಕೊಂಡರೂ ಚರ್ಚೆಯನ್ನು ನಿಲ್ಲಿಸುವ ಉದ್ದೇಶದಿಂದ ಪ್ರತಿಯೊಬ್ಬರೆಡೆಗೆ ನಗು ಬೀರುತ್ತಾ ಕಾಫಿ ಮಾಡಿಕೊಟ್ಟರು. ಆ ಹುಡುಗಿ ಪಿಯಾನೊದ ಕಡೆಗೆ ಹೋಗುವಾಗ ಕೆಂಚುಗೂದಲಿನ ವ್ಯಕ್ತಿ ಒಂದಷ್ಟು ದೂರದಲ್ಲಿ ತಣ್ಣಗೆ ಅದನ್ನು ಕಣ್ಣಿನಿಂದಲೇ ಪರೀಕ್ಷಿಸಿದ. ಅಷ್ಟರಲ್ಲಿ ಇನ್ನೊಬ್ಬ ಹೆಣ್ಣುಮಗಳು ಶಾಲಾ ಹುಡುಗಿಯೊಬ್ಬಳ ಜೊತೆ ಒಳಗೆ ಬಂದಳು. ಅನುಮಾನದಿಂದಲೇ ಅವರು ಕುಳಿತುಕೊಂಡರು.

ಒಮ್ಮೆಲೇ ಹುಡುಗಿ ಪಿಯಾನೊವನ್ನು ನುಡಿಸತೊಡಗಿದಳು. ಅದರ ಕೀಲಿಗಳಿಂದ ಹೊರಟ ಝೇಂಕಾರ ಇಡಿಯ ವಾತಾವರಣವನ್ನು ತುಂಬಿಕೊಂಡಿತು. ಲಯವಿಲ್ಲದ, ಮೊಳೆಯನ್ನು ನೆಲಕ್ಕೆ ಗೀರಿದ ಹಾಗೆ ಇರುವ ಭಯಂಕರ ನಾದ! ಒಲಿವೈರಾ ಕುಟುಂಬ ತಮ್ಮ ಅತಿಥಿಗಳ ಮುಖಗಳನ್ನೇ ಆತಂಕದಿಂದ ನೋಡಿದರು. ಕೆಂಚುಗೂದಲ ವ್ಯಕ್ತಿ ಮಾತ್ರ ತೀರ ನಿಷ್ಪಂದನಾಗಿ ನಿಂತುಕೊಂಡಿದ್ದ. ಉಳಿದವರು ಒಂದೇ ಪ್ರತಿಕ್ರಿಯೆಯನ್ನು ನಿರೀಕ್ಷಿಸುವವರಂತೆ ಪರಸ್ಪರ ಮುಖ ನೋಡಿಕೊಂಡರು. ಹೊಸದಾಗಿ ಬಂದ ಹೆಣ್ಣುಮಗಳು ಮುಖ ಕಿವುಚಿಕೊಂಡಳು. ನುಡಿಸುತ್ತಿದ್ದ ಹುಡುಗಿ ಏನೋ ಹೆಚ್ಚು ಸಹನೆಯಿಂದ ಹಳೆಯ ಪಿಯಾನೊವನ್ನು ನೋಡುತ್ತಿದ್ದಳು. ಅದೊಂದು ರೀತಿಯ ಮೊಕದ್ದಮೆಯಂತಿತ್ತು. ಹಾಗೂ ಪಿಯಾನೊ ಅಪರಾಧಿ ಸ್ಥಾನದಲ್ಲಿತ್ತು. ತಪ್ಪೊಪ್ಪಿಸುವ ಪ್ರಯತ್ನದಲ್ಲಿರುವಂತೆ ಆ ಎಳೆಯ ಹುಡುಗಿ ಪಿಯಾನೊ ನುಡಿಸುವುದನ್ನು ಮುಂದುವರಿಸಿದಳು. ಅದರ ಸದ್ದು ಹೇಗಿತ್ತೆಂದರೆ, ಹೊಟ್ಟೆನೋವಿನಿಂದ ಬಳಲುತ್ತಿದ್ದ ಗಾಯಕಿಯೊಬ್ಬಳ ಕೀರಲು ಧ್ವನಿಯಂತೆ ಕುಗ್ಗಿ ಒಡೆದುಹೋಗಿತ್ತು. ಕೆಲವು ಕೀಲಿಗಳು ಕೆಲಸ ಮಾಡುತ್ತಲೇ ಇರಲಿಲ್ಲ. ಅದರ ಮಂದ್ರ, ನಾಯಿಯ ಊಳಿಡುವಿಕೆಯಂತೆ ಕೇಳಿಸುತ್ತಿತ್ತು. ಕೋಣೆಯಲ್ಲಿದ್ದ ಎಲ್ಲರ ಮುಖದ ಮೇಲೂ ನಗೆ. ಹುಡುಗಿಯೀಗ ಅದರ ಮೇಲಿನ ದ್ವೇಷವನ್ನೆಲ್ಲ ಹೊರಹಾಕುವವಳಂತೆ ಕರ್ಕಶ ಸ್ವರದಲ್ಲಿ ನಿಷ್ಪ್ರಯೋಜಕ ಕೀಲಿಗಳನ್ನು ಜಜ್ಜುತ್ತ ಕೂತಳು. ಅದೊಂದು ಭೀಕರ ಸನ್ನಿವೇಶ.

'ಈ ಪಿಯಾನೊದ ಬಗ್ಗೆ ಕೆಲವು ವಿಚಾರಗಳು ನಿಮಗೆ ಗೊತ್ತಿರಲಿ. ಅದು ವಾತಾವರಣಕ್ಕೆ ಸೂಕ್ಷ್ಮವಾಗಿ ಸ್ಪಂದಿಸುತ್ತದೆ. ಉಷ್ಣಾಂಶ ಹೆಚ್ಚಿದಾಗಲೆಲ್ಲ ಅದರ ಧ್ವನಿ ಬದಲಾಗುತ್ತದೆ' ಎಂದು ಒಲಿವೈರಾ ವಿವರಿಸಿದ.